International Journal of Kannada Research
www.kannadajournal.com

ISSN: 2454–5813
IJKR 2017; 3(4): 08-10
© 2017 IJKR
www.kannadajournal.com
Received: 03-08-2017
Accepted: 04-09-2017

**ನೇಮಿನಾಥ ತಪಕೀರೆ**
ಸಂಶೋಧನ ವಿದ್ಯಾರ್ಥಿ, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**Correspondence**
**ನೇಮಿನಾಥ ತಪಕೀರೆ**
ಸಂಶೋಧನ ವಿದ್ಯಾರ್ಥಿ, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಖಗೇಂದ್ರಮಣಿ ದರ್ಪಣಂ ಗ್ರಂಥದಲ್ಲಿ ಸ್ಥಾವರ ವಿಷಗಳ ಚರ್ಚೆ

**ನೇಮಿನಾಥ ತಪಕೀರೆ**

ವಿಶ್ವಪರಂಪರೆಯಲ್ಲಿ ಭಾರತೀಯ ವೈದ್ಯಶಾಸ್ತ್ರವು ತನ್ನದೇ ಆದ ಕೊಡುಗೆಯನ್ನು ನೀಡುವ ಮೂಲಕ ಸುಮಾರು 3000 ವರ್ಷಗಳಿಂದ ಸುಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಅದು ವೇದಗಳ ಕಾಲದ ಇತಿಹಾಸವನ್ನು ಹೊಂದಿದ್ದು, ಅಥರ್ವವೇದದ ಕೌಶಿಕಸೂತ್ರದಲ್ಲಿ ಮಾಂತ್ರಿಕ ಕರ್ಮಗಳಲ್ಲಿ ಚಿಕಿತ್ಸಾಕಲೆ ಮತ್ತು ಗಿಡಮೂಲಿಕೆಗಳ ಬಗ್ಗೆ ತಿಳಿಸಲಾಗಿದೆ. ಶುಶ್ರುತ, ಚರಕ, ವಾಗ್ಭಟ, ಮಾಧವ, ಪರಾಶರ, ಯೋಗರತ್ನಾಕರರು ಭಾರತೀಯ ವೈದ್ಯಪರಂಪರೆಯನ್ನು ವಿಶ್ವಮಟ್ಟದಲ್ಲಿ ಬೆಳಕಿಗೆ ತಂದ ಮಹನೀಯರು. ಭಾರತೀಯ ವೈದ್ಯ ಪರಂಪರೆಯು ಬೆಳೆದು ಬಂದಿರುವುದು ಆಯುರ್ವೇದ ಶಾಸ್ತ್ರದ ನೆಲೆಯಲ್ಲಿ. ಈ ನೆಲೆಯಲ್ಲಿ ಕನ್ನಡ ಸಾಹಿತ್ಯಿಕ ಇತಿಹಾಸವನ್ನು ಅವಲೋಕಿಸಿದಾಗ ಅನೇಕ ವೈದ್ಯಗ್ರಂಥಗಳು ಲಭ್ಯವಾಗುತ್ತವೆ. ಈ ನಿಟ್ಟಿನಲ್ಲಿ ನಮಗೆ ಲಭಿಸಿದ ಅತ್ಯಪರೂಪದ ಗ್ರಂಥವೆಂದರೆ 14ನೇ ಶತಮಾನದಲ್ಲಿ ಒಂದನೇ ಮಂಗರಾಜನು ರಚಿಸಿದ 'ಖಗೇಂದ್ರಮಣಿ ದರ್ಪಣಂ'. ಸಂಸ್ಕೃತದಲ್ಲಿ "ಕಾಶ್ಯಪ ಸಂಹಿತೆ" ಇರುವಂತೆ ಕನ್ನಡದಲ್ಲಿ ಒಂದು ವಿಷಚಿಕಿತ್ಸಾ ಗ್ರಂಥವು ಬೇಕೆಂದು ಮಂಗರಾಜನು ಆಶಿಸಿದ್ದಾನೆ. ಕಾಶ್ಯಪ ಸಂಹಿತೆಗೆ "ಗರುಡ ಪಂಚಾಕ್ಷರೀ ಕಲ್ಪಂ" ಎಂಬ ಇನ್ನೊಂದು ಹೆಸರಿದ್ದು ಅದು ವಿಷಚಿಕಿತ್ಸೆಯನ್ನು ವಿಶದೀಕರಿಸುತ್ತದೆ. ಈ ಕೃತಿಯಲ್ಲಿ ವಿಷವೈದ್ಯಶಾಸ್ತ್ರದ ನಿರೂಪಣೆಯಿದೆ.

ಖಗೇಂದ್ರ ಎಂದರೆ 'ಗರುಡ'. ಅವನು ಪಕ್ಷಿರಾಜ ಮತ್ತು ಸರ್ಪಶತ್ರು. ವಿಷಕ್ಕೆ ಅವನು ವಿಶಿಷ್ಟವಾದ ಮದ್ದು. ಕೃತಿಯಲ್ಲಿ ಪದ್ಯಗಳ ಮೂಲಕ ವಿವಿಧ ರೀತಿಯ ವಿಷಗಳು ಹಾಗೂ ಅವುಗಳಿಗೆ ವಿಷನಿದಾನ ಪದ್ಧತಿಯನ್ನು ತಿಳಿಸಿಕೊಡುತ್ತಾನೆ. ವಿಷನಿದಾನ ಚಿಕಿತ್ಸಾ ವಿವರಗಳನ್ನೊಳಗೊಂಡ ಖಗೇಂದ್ರಮಣಿ ದರ್ಪಣವು ಆಯುರ್ವೇದ ಸಾಹಿತ್ಯದಲ್ಲಿಯೇ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ಇಂತಹ ಅಪರೂಪದ ಗ್ರಂಥದಲ್ಲಿ ಅನೇಕ ರೀತಿಯಿಂದ ಮನುಷ್ಯನಿಗೆ ಆಗುವ ವಿಷಸ್ಪರ್ಶ ಹಾಗೂ ಅವುಗಳ ಪರಿಹಾರಗಳ ಕುರಿತು ಚರ್ಚೆಯಿದೆ.

ಮಂಗರಾಜನ ಈ ಕೃತಿಯಲ್ಲಿ ಹದಿನಾರು ಅಧಿಕಾರಗಳಿದ್ದು, ಮನುಷ್ಯನಿಗೆ ಘಾತಕವಾಗಬಹುದಾದ ವಿಷಗಳನ್ನು ಮೂರು ವಿಧವಾಗಿ ವಿಂಗಡನೆ ಮಾಡಿದ್ದಾನೆ. 1) ಸ್ಥಾವರ ವಿಷ: ತರಕಾರಿ, ಧಾನ್ಯ, ಬೀಜಾದಿಗಳಿಂದ ಉಂಟಾಗಬಹುದಾದದ್ದು 2) ಜಂಗಮ ವಿಷ: ಹಾವು, ಚೇಳುಗಳಿಂದ ಹಾಗೂ ಮನುಷ್ಯನ ಉಗುರುಗಳಿಂದಾಗಬಹುದಾದ ನಂಜು 3) ಕೃತ್ರಿಮ ವಿಷ: ಮನುಷ್ಯ ಅತಿಯಾಗಿ ಔಷಧಗಳನ್ನು ತೆಗೆದುಕೊಳ್ಳುವುದರಿಂದ ಆಗಬಹುದಾದ ವಿಷ. ಹಾಗೂ ಇವುಗಳಿಂದಾದ ವಿಷಕ್ಕೆ ವಿಷನಿದಾನ ಪದ್ಧತಿಗಳನ್ನು ಚರ್ಚಿಸಿದ್ದಾನೆ. ಪ್ರಸ್ತುತ ಲೇಖನದಲ್ಲಿ ಸ್ಥಾವರವಿಷದ ಬಗ್ಗೆ ಮಂಗರಾಜನ ವಿಚಾರಗಳು ಹಾಗೂ ವಿಷನಿದಾನ ಪದ್ಧತಿಗಳನ್ನು ಚರ್ಚಿಸಲಾಗಿದೆ.

*ದೇವಾದಿದೇವನಂ ಜಿತ । ಭಾವಜನನಚಿಂತ್ಯ ಮುಕ್ತೀಲಕ್ಷ್ಮೀವರನಂ*
*ಭಾವಿಸಿ ವಂದಿಸಿ ಜನದಾ । ಸ್ಥಾವರವಿಷಹರಣಂ ವಿವಕ್ಷಿಸಿ ಪೇಟ್ವೆಂ ॥*

ಹೀಗೆ ಸ್ಥಾವರವಿಷ ಅಧಿಕಾರವನ್ನು ಆರಂಭಿಸುತ್ತಾನೆ ಮಂಗರಾಜ. ಮುಸ್ತೆ, ವತ್ಸನಾಭ, ಬಲಾಹ, ಪುಷ್ಕರಶರ, ಹರಿದ್ರಾ, ಶೃಂಗೀಕುಲ, ಮೇಷಶೃಂಗಿ, ಹಾಲಾಹಲ, ಕಾಸ್ತುಕ, ರಕ್ತಶೃಂಗಿ, ಮಧುಪಾಕ, ಇಂದ್ರವಜ್ರ, ಕರ್ಕಾಟಕ, ಶೃಂಗಿ, ಮಧುರ, ಕ್ರೌಂಚ, ಹರಿತ, ಅರ್ಕ, ಕಾಳಕೂಟ, ಪುಂಡರೀಕ, ಸಂಕೋಚ, ಗಾಳವ, ಅಂಜನ, ರೋಹಿಣ, ಏಕವೀರ ಎಂಬ ಒಟ್ಟು ಇಪ್ಪತ್ತೈದು ಸ್ಥಾವರ ವಿಷಗಳನ್ನು ಉಲ್ಲೇಖಿಸಿ ಅವುಗಳಲ್ಲಿ ಸಂಕೋಚ, ಕಾಳಕೂಟ, ವತ್ಸನಾಭಿ, ಮುಸ್ತಕ, ಶೃಂಗ ಈ ಐದು ಬ್ರಹ್ಮನೂ ತಿಳಿಯದ ಭೂಮಿಯ ಮೇಲಿರುವ ಅತಿಕ್ರೂರ ವಿಷಗಳು ಎಂದು ತಿಳಿಸುತ್ತಾನೆ. ಇನ್ನುಳಿದವುಗಳು ಮಧ್ಯಮ ಮತ್ತು ಅಧಮ ವಿಷಗಳಾಗಿವೆ.

ಅತಿಸಾರ, ಮೂರ್ಛೆ, ದಾಹ, ಬುದ್ಧಿಭ್ರಮಣ, ಭ್ರಾಂತಿ, ಹೃದಯಶೂಲೆ, ತಾಪ, ಬಲಹೀನತೆ, ಬೆವರುವುದು, ಕೋಪ, ದುಃಖ, ಕಣ್ಣು ಮಂಜಾಗುವುದು, ಕೆಮ್ಮು ಇವೆಲ್ಲವೂ ವಿಷಸೋಂಕಿನ ಲಕ್ಷಣಗಳಾಗಿವೆ. ಇವೆಲ್ಲವುಗಳಿಗೂ ಮಂತ್ರ ಪರಿಹಾರವನ್ನು ಹೇಳಿದ್ದಾನೆ.

> ಓಂ ಕಾಳಾಯ ಮಹಾಕಾಳಾಯ ಕಾಳಗರ್ಭವಿಹಾ
> ಅಮೃತಗರ್ಭ ದೇವಿ ಓಂ ಕ್ಷಾಂ ಕ್ಷೀಂ ಕ್ಷೂಂ
> ಕ್ಷಾಂ ಕ್ಷೂಂ ಓಂ ಹೂಂ ಫಟ್ ಸ್ವಾಹಾ ನಾಸ್ತಿ ವಿಷ ಸ್ವಾಹಾ ॥

ವಿಷ ಪರಿಹಾರಕ್ಕೆ ಈ ಭೈರವೀ ಮಂತ್ರಪಠಣ ಮಾಡಬೇಕು.

> ಓಂ ಅಮೃತೇ ಅಮೃತೋದ್ಭವೇ ಅಮೃತವರ್ಷಿಣೀ ಇದಮೃತಂ ಸ್ರಾವಯಸಂ
> ಕ್ಲಿಂ ಬ್ಲೂಂ ದ್ರಾಂ ದ್ರಿಂ ದ್ರಾವಯ ಹಂ ಝುಂ ಝಿಂ ಹಂಸ ಸ್ವಾಹಾ ॥

ಇದು ಅಮೃತಧಾರಾ ಮಂತ್ರವಾಗಿದೆ. ಇದರ ಜೊತೆಗೆ ಪಾರ್ಶ್ವನಾಥ, ಮಲ್ಲಿನಾಥ ತೀರ್ಥಂಕರರು, ತ್ರಿಭುವನ ಗರುಡದೇವ, ಶ್ರೀಧರದೇವ, ಒಡ್ಡಾಮರೇಶ್ವರೀ, ಶ್ರೀರಾಮೇಶ್ವರ, ಹರರನ್ನೊಳಗೊಂಡ ನಾಲ್ಕು ಮಂತ್ರಗಳ ಪಠಣ ಮಾಡುವುದರಿಂದ ಅತೀ ಶೀಘ್ರವಾಗಿ ವಿಷಪರಿಹಾರವಾಗುತ್ತದೆ.

ಉಮ್ಮತ್ತದ ಕಾಯಿಯೊಂದಿಗೆ ಲೋಧ್ರವನ್ನು ಅಥವಾ ಉಪ್ಪನ್ನು ಬೆರೆಸಿ ಕುದಿಸಿ ಕುಡಿಸಿದರೆ, ಕಾಡುಹೀರೆಯ ಬೇರನ್ನು ನೀರಿನಲ್ಲಿ ಕುದಿಸಿ ಜೇನುತುಪ್ಪ ಅಥವಾ ತುಪ್ಪದೊಡನೆ ಸೇವಿಸುವುದರಿಂದ; ಕಹಿಸೋರೆಯ ಎಳೆಕಾಯಿಯನ್ನು ಸಣ್ಣ ಬೆಂಕಿಯಲ್ಲಿ ಬೇಯಿಸಿ ಬೆಲ್ಲದೊಂದಿಗೆ ಮಾತ್ರೆಯ ರೂಪದಲ್ಲಿ ನೀಡಿದರೆ ವಿಷ ಪರಿಹಾರವಾಗುತ್ತದೆ[7]. ತಣ್ಣೀರಿನಲ್ಲಿ ಪುತ್ರಂಜೀವವನ್ನು ಬೆರೆಸಿ ಕೊಡುವುದರಿಂದ ಸಿಂಹವನ್ನು ಕಂಡು ಆನೆ ಬೆದರಿ ಓಡುವಂತೆ ವಿಷವು ಮಾಯವಾಗುತ್ತದೆ. ಬಜೆ, ತುತ್ಥ, ಟಂಕಣ, ರಜನಿ, ಭುಜಂಗಾಕ್ಷಿ, ಶೈಲವರ್ಣಿಕೆ ಇವುಗಳಲ್ಲಿ ಯಾವುದಾದರೊಂದನ್ನು ಮನುಷ್ಯರ ಮೂತ್ರದಲ್ಲಿ ಬೆರೆಸಿ ಕೊಡುವುದರಿಂದ ಎಲ್ಲ ರೀತಿಯ ವಿಷಗಳು ಪರಿಹಾರವಾಗುತ್ತವೆ.

ನರಮೂತ್ರ, ಗೋಮೂತ್ರ ಅಥವಾ ಹಳೆಯ ತುಪ್ಪದೊಂದಿಗೆ ಅರಿಸಿನವನ್ನರೆದು ಕೊಟ್ಟ ಕಾಳಕೂಟ, ಹಾಲಾಹಲ ವಿಷಗಳು ಪರಿಹಾರವಾಗುತ್ತವೆ. ಅರಿಸಿನ ಹಿಟ್ಟು ಅಥವಾ ಅರಿಸಿನ ಕೋಷ್ಠಗಳನ್ನು ಹಸುವಿನ ಹಾಲು ಇಲ್ಲವೇ ತುಪ್ಪ, ಜೇನುತುಪ್ಪಗಳಲ್ಲಿ ಸೇವಿಸುವುದರಿಂದ ವಿಷ ಪರಿಹಾರ. ಬಿಳಿಗುಂಜಿಯ ಬೇರು ಮತ್ತು ಬಜೆಗಳನ್ನು ನೀರಿನಲ್ಲಿ ಸೇರಿಸಿ ಸೇವಿಸುವುದರಿಂದ ದಾರುಣವಿಷ ನಿವಾರಣೆಯಾಗುತ್ತದೆ. ತಿಗುಡೆ ಮತ್ತು ಕೊತ್ತಂಬರಿಗಳು ಹಾಲಾಹಲ ವಿಷವನ್ನು; ಬೆಲ್ಲ ಮತ್ತು ಕಾರ್ಪಾಸದ ರಸಗಳು ಕಾಲಕೂಟವಿಷವನ್ನು ಪರಿಹರಿಸುತ್ತವೆ.

ಅಂಗುರದಿಂದ ಶೃಂಗೀ ವಿಷ, ಗೋವಿನ ಶಗಣಿಯ ರಸದಿಂದ ಅಸಾಧ್ಯವೆನಿಸಿದ ರಕ್ತಶೃಂಗೀ ವಿಷವು ನಿವಾರಣೆಯಾಗುವುದು. ಸಾಸುವೆ, ಮೆಣಸು, ಉತ್ತರಣೆಗಳನ್ನು ತುಪ್ಪ ಮತ್ತು ಸಕ್ಕರೆಯೊಂದಿಗೆ ಅರೆದು ಸೇವಿಸುವುದರಿಂದಲೂ; ಜೀರಿಗೆ, ಅತಿಬಜೆ, ತಗಚೆ, ಅಗಸೆ, ಅರಿಸಿನ, ಅಭ್ರಕ ಈ ಯಾವುದಾದರೊಂದನ್ನು ಆಡಿನ ಮೂತ್ರದಲ್ಲಿ ಬೆರೆಸಿ ಕೊಡುವುದರಿಂದಲೂ; ಲಾಮಂಚನದ ಬೇರು, ನೆಲ್ಲಿಕಾಯಿ ಮತ್ತು ತಾರೆಕಾಯಿಗಳನ್ನು ನೀರಿನಲ್ಲಿ ಕುದಿಸಿ ಕೊಡುವುದರಿಂದಲೂ ವತ್ಸನಾಭಿ ವಿಷವು ಪರಿಹಾರವಾಗುವುದು.

ವಮನ ಉಪವಾಸ ಮಾಡಿಸಿ ಕ್ರಮೇಣವಾಗಿ ಹಾಲು ತುಪ್ಪಗಳನ್ನು ಕೊಟ್ಟು ಮಲಹರಣ ಮಾಡಿಸುವುದರಿಂದಲೂ; ಸೈಂಧವ ಲವಣವನ್ನು ಬಿಸಿನೀರಿನೊಡನೆ ಕೊಡುವುದರಿಂದಲೂ; ಬಿಳಿಯ ಸುಂಡೆಯ ಕಾಯಿಯಿಂದಲೂ; ಹಿಪ್ಪಲಿ, ನೀಲಿ, ಒಣಶುಂಠಿ ಯಾವುದಾದರೊಂದನ್ನು ಕೂಡಲೇ ಅರೆದು ಕೊಡುವುದರಿಂದಲೂ; ಒಣಶುಂಠಿ ಮತ್ತು ಮಧುಕಗಳನ್ನು ಸಮನಾಗಿ ಮಜ್ಜಿಗೆಯೊಡನೆ ಕುಡಿಸುವುದರಿಂದ ಅಥವಾ ಎಕ್ಕೆಯನ್ನು ಬಿಸಿನೀರಿನಲ್ಲಿ ಬೆರೆಸಿ ಕೊಡುವುದರಿಂದಲೂ ನಾಂಗುರಿಕನ (ಕೋಳಿಕುಟುಮನ ಗಿಡ) ವಿಷವು ಪರಿಹಾರವಾಗುತ್ತದೆ.

ಅರಿಸಿನವನ್ನು ಮೊಸರು ತುಪ್ಪಗಳೊಡನೆ ಅರೆದು ಕೊಡುವುದರಿಂದ; ಅಣಿಲೆ ಅರಿಸಿನ ಮತ್ತು ಸಕ್ಕರೆಯನ್ನು ಬೆರೆಸಿ ಕೊಡುವುದರಿಂದಲೂ; ಲಾಮಂಚ, ಅರಿಸಿನ, ಮೆಣಸು, ಮಧುಕ ಇವುಗಳನ್ನು ಕೂಡಿಸಿ ನೀರು ಅಥವಾ ಹಾಲಿನಲ್ಲಿ ಕೊಡುವುದರಿಂದಲೂ; ಮಲ್ಲಿಗೆ ಮತ್ತು ನೀಲಿಗಳನ್ನು ಒಟ್ಟಿಗೆ ಸೇರಿಸಿ ಕೂಡಲೆ ಕೊಡುವುದರಿಂದಲೂ; ಅರಿಸಿನ ಸಕ್ಕರೆಗಳನ್ನು ಅಥವಾ ಮಧುಕ ಮತ್ತು ಅಣಿಲೆಯನ್ನು ಅರೆದು ಕೊಡುವುದರಿಂದಲೂ; ಖದಿರದ ಹೂವು, ಅರದ ರಸ ಮತ್ತು ಅಂಬಿಲ, ಮಾವು, ಹಸುವಿನ ಹಾಲು ಉತ್ತಮವಾದ ಬೆಣ್ಣೆ ಮತ್ತು ದ್ರಾಕ್ಷಿಗಳನ್ನು ಸೇವಿಸುವುದರಿಂದಲೂ; ತರಣಿಯ ಬೇರನ್ನು ನೀರಿನಲ್ಲಿ, ಮೆಣಸನ್ನು ಮಜ್ಜಿಗೆಯಲ್ಲಿ, ಅರಿಸಿನವನ್ನು ಬಿಸಿನೀರಿನಲ್ಲಿ ಅರೆದು ಕೊಡುವುದರಿಂದಲೂ ಅಶ್ವಮಾರಿ ಅಥವಾ ಕಣಗಿಲೆಯ ವಿಷವು ಪರಿಹಾರವಾಗುವುದು.

ಅಂಬಿಲ ಲವಣ, ಹರೀತಕಿ ನೇರಳೆಹಣ್ಣು, ಯಷ್ಠಿ, ಮಧುಕಗಳನ್ನು ಸೇವಿಸುವುದರಿಂದಲೂ; ಕಿರುನೆಲ್ಲಿ ಅಕ್ಕಿಕಚ್ಚುಗಲನ್ನು ಅಥವಾ ಕಾಂಜಿಕವನ್ನು ಕೊಟ್ಟರೆ ಬತ್ತದ ಬೇರಿನಿಂದಾದ ವಿಷವನ್ನು ಪರಿಹರಿಸಬಹುದು. ಧಾನ್ಯದ ಗಂಜಿಯನ್ನು ನೀರಿನೊಡನೆ ಅಥವಾ ಪುನರ್ನವಿಯನ್ನು ಮೊಸರಿನೊಡನೆ ಸೇವಿಸುವುದರಿಂದ, ನೇರಳೆಹಣ್ಣಿನ ರಸವನ್ನು, ಕೊನ್ನಾರಿಗಡ್ಡೆಯನ್ನು ಸೇವಿಸುವುದರಿಂದಲೂ ಕಹಿಸೋರೆಯ ವಿಷವು ನಿವಾರಣೆಯಾಗುವುದು.

ನೇರಳೆ ತೊಗಟೆಯನ್ನು ಹಾಲಿನಲ್ಲಿ ಅಥವಾ ಅರಿಸಿನ ಮತ್ತು ಲಾಮಂಚಗಳನ್ನು ಬಿಸಿನೀರಿನಲ್ಲಿ ಕೊಡುವುದರಿಂದ ಕಾಂಜೀರ ಮಿಶ್ರಿತ ಎಣ್ಣೆಯ ವಿಷವು ನಿವಾರಣೆಯಾಗುವುದು. ಬಾಳೆಯ ಹಣ್ಣು, ನೇರಿಲ ತೊಕ್ಕು, ಕುದಿಸಿದ ನೀರು ಅಥವಾ ಸಕ್ಕರೆ ಲಾಮಂಚಗಳನ್ನು ನೀರಿನಲ್ಲಿ ಬೆರೆಸಿ ಕೊಡುವುದರಿಂದ ಇಟ್ಟಿಬೀಜದ ವಿಷವು ಪರಿಹಾರವಾಗುವುದು[15]. ನಿಂಬೆಯ ರಸ ಮತ್ತು ಪುತ್ರಂಜೀವವನ್ನು ಅಥವಾ ಹೆಸರುಕಾಳು ಕುದಿಸಿದ ಕಟ್ಟನ್ನು ಕುಡಿಸುವುದರಿಂದ ಜೇಪಾಳದ ವಿಷ ನಿವಾರಣೆಯಾಗುವುದು.

ತಾವರೆ ಅಥವಾ ಆಸತಿ ಇಲ್ಲವೆ ಎಕ್ಕದ ಬೇರು, ತಾವರೆ ಮತ್ತು ಸಕ್ಕರೆಯೊಡನೆ ಹತ್ತಿಯಬೀಜ, ಹಾಲು ಎರಡು ಅರಿಸಿನ ಬೇರುಗಳನ್ನು ಅಥವಾ ಕೇದಗೆಯ ಬೇರನ್ನು ನೀರಿನೊಡನೆ ಕೊಡುವುದರಿಂದ ಉಮ್ಮತ್ತದಿಂದಾದ ವಿಷವು ಪರಿಹಾರವಾಗುವುದು. ಚೊಕ್ಕಣಿಗೆಯೊಂದಿಗೆ ಅಮೃತಬಳ್ಳಿ ಇಲ್ಲವೆ ಕಿರುಗೋಣೊಯನ್ನು ಕೊಟ್ಟರೆ ಸಣಬಿನಿಂದಾದ ವಿಷ ನಿವಾರಣೆ. ಜಾಪಾಳ, ಉಮ್ಮತ್ತ ಮತ್ತು ಅಣಿಲೆ ಕೊಟ್ಟರೆ ಇಲಿವಾಲದಿಂದ ಉಂಟಾದ ವಿಷವು ಪರಿಹಾರವಾಗುವುದು[16]. ಎಳ್ಳೆಣ್ಣೆ ಸಕ್ಕರೆ ಮತ್ತು ಮಜ್ಜಿಗೆಯನ್ನು ಕುಡಿಯುವುದರಿಂದಲೂ; ಎಣ್ಣೆ ಮತ್ತು ಟಂಕಣಗಳನ್ನು ನೀರಿನೊಡನೆ ಇಲ್ಲವೆ ಗೋಣಿ ಮತ್ತು ಅಣಿಲೆಗಳನ್ನು ಹಾಲಿನೊಡನೆ ಕೊಡುವುದರಿಂದಲೂ; ಎಳನೀರು ಮತ್ತು ಹಾಲುಗಳಿಂದ ಸ್ನಾನ–ಪಾನ ಮಾಡಿಸುವುದರಿಂದಲೂ ಎಕ್ಕದ ಹಾಲಿನ ದೋಷವು ನಿವಾರಣೆಯಾಗುವುದು.

ಆವರಿಕೆ, ನೆಲ್ಲಿ, ಯಷ್ಟಿಮಧುಕ, ಎಳ್ಳು, ಶತಾವರಿ, ಕೊಗ್ಗಿ, ಹಸುವಿನ

ಹಾಲು, ತಾವರೆ, ನೇರಿಲು, ಅಂಕೋಲೆ, ಸಕ್ಕರೆ, ಪಾಲ್ಮರದ ಚಿಗುರು, ಸೂರ್ಯಭಕ್ತ, ಕಟುಕತ್ರಯ ಇವುಗಳನ್ನು ಬೇರೆ ಬೇರೆಯಾಗಿ ಲೇಪನ, ಪಾನ ಮಾಡುವುದರಿಂದ ಕಳ್ಳಿಯಿಂದಾದ ವಿಷ ಪರಿಹಾರವಾಗುವುದು. ನೇರಳೆ ಎಲೆ ಮತ್ತು ಓವನ್ನು ಅರೆದು ಮಜ್ಜಿಗೆಯಲ್ಲಿ ಕೊಡಲು ಹುಲಿಗಿಲ ವಿಷವೂ ಗಿರಿಕರ್ಣಿಕೆಯನ್ನು ನೀರಿನೊಡನೆ ಕೊಟ್ಟರೆ ಕಾಗಿದೊಂಡೆಯ ವಿಷ ನಿವಾರಣೆಯಾಗುವುದು. ಅಂಗುರುವಿನ ವಿಷವನ್ನು ಕೊಗ್ಗಿಯ ಕಷಾಯದಿಂದ, ನುಗ್ಗೆಯ ವಿಷವನ್ನು ಹಾಲಿನಿಂದ, ಅಶ್ವಗಂಧಿಯ ವಿಷವನ್ನು ತ್ರಿಫಲೆಯ ಕಷಾಯದಿಂದ ನಿವಾರಣೆಯಾಗುವುದು. ಹುಚ್ಚುಕಗ್ಗಲೀಗಿಡದ ತಿರುಳು ಮತ್ತು ಸಿರಿಸದ ಹೂಗಳನ್ನು ಅರೆದು ಕೊಡುವುದರಿಂದ ದೇವದಾಳಿಯ ವಿಷವನ್ನೂ; ಜಾದು ಮಜ್ಜಿಗೆ, ಲೋಧ್ರ ನೈದಿಲೆಗಳಿಂದ ಮಗ್ಗಾರೆ ವಿಷವನ್ನೂ; ಕಿರುಕುಸಾಲೆ ಮತ್ತು ಅಂಬಲಿಯಿಂದ ಚಿಲ್ಲದ ವಿಷವನ್ನೂ; ಗೋರೋಚನ, ಕುಂಕುಮ ಕೇಸರಿ, ಶ್ರೀಗಂಧಗಳನ್ನು ನೀರಿನೊಡನೆ ಅಥವಾ ಭೃಂಗರಸವನ್ನು ಕೊಡುವುದರಿಂದಲೂ ಅಣಿಲೆಯನ್ನು ಬಿಸಿನೀರಿನೊಡನೆ ತಾವರೆ ಶ್ರೀಗಂಧಗಳನ್ನು ತಣ್ಣೀರಿನಲ್ಲಿ ನೀಡುವುದರಿಂದಲೂ ಕಿರುಕಸಾಲೆ ಮತ್ತು ಕರಿಯ ಜೀರಿಗೆಯನ್ನು ಅರೆದು ನೀರಿನೊಂದಿಗೆ ಕೊಡುವುದರಿಂದಲೂ ಕರ್ಪೂರದ ವಿಷವನ್ನು ಪರಿಹರಿಸಬಹುದು. ಕರ್ಪೂರ ಮತ್ತು ಬೆಲ್ಲ ಹಾಗೂ ಕರ್ಪೂರ ಮತ್ತು ಹುಳಿಗಳು ಬೆರೆತರೆ ವಿಷವಾಗುತ್ತದೆ. ಈ ವಿಷವನ್ನು ನೀರುಪ್ಪುಗಳಿಂದ, ಬಜೆ, ಪಾಲ್ಮರದ ರಸಗಳಿಂದ ಅಥವಾ ಭೃಂಗರಸದಿಂದ ವಿಷ ನಿವಾರಣೆಯಾಗುತ್ತದೆ.

ಕಿರುನೆಲ್ಲಿ, ಅಗಸೆ, ಶ್ರೀಗಂಧ, ಕುಂಕುಮಕೇಸರಿ, ತ್ರಿಶೂಲಿ, ವೀಳ್ಯದೆಲೆ, ಸಹದೇವಿಗಳು ಒಂದೊಂದರಿಂದಲೂ ಪಾದರಸದ ವಿಷ ನಿವಾರಣೆಯಾಗುತ್ತದೆ. ಶ್ರೀಗಂಧ, ಸಬ್ಬಸಿಗೆಗಳಿಂದ ಗಂಧಕದ ವಿಷವೂ; ಸೈಂಧವ ಬೆಲ್ಲ, ಇಂಗುಗಳನ್ನು ಕೊಡುವುದರಿಂದ ಬಿಳುಗಾರದ ವಿಷವೂ; ಬೇಲದ ಬೇರಿನಿಂದ ಕಂಕುಷ್ಠದ ವಿಷವೂ; ಅಸಡಿಯ ಬೇರಿನ ರಸ ಮತ್ತು ಕುಸುಬೆಯ ರಸಗಳಿಂದ ಅಭ್ರಕದ ವಿಷವೂ; ಬಿಸಿನೀರಿನಲ್ಲಿ ಕಡೆದ ಮಜ್ಜಿಗೆಯೊಡನೆ ನೆಲ್ಲಿಕಾಯಿಯನ್ನು ಕೂಡಿಸಿ ಕೊಟ್ಟರೆ ಸೂಜಿಗಲ್ಲಿನ ವಿಷವೂ; ಲಾಮಂಚ ಅಥವಾ ಏಲಕ್ಕಿಯನ್ನು ಅರೆದು ಅಕ್ಕಿ ಕಚ್ಚಿನಲ್ಲಿ ಕೊಡುವುದರಿಂದ ಬಜೆಯ ವಿಷವೂ; ನೆಲ್ಲಿಕಾಯಿಯನ್ನು ತಿನ್ನುವುದರಿಂದ ಮೆಣಸಿನಿಂದಾದ ವಿಷವೂ; ಶಾಲ್ಮಲಿಯ ನೀರಿನಿಂದ ಇಂಗಿನ ವಿಷವೂ; ಸುಗಂಧಿಯಿಂದ ತ್ರಿಕಟುಕದ ವಿಷಗಳೂ ಪರಿಹಾರವಾಗುತ್ತವೆ. ವಿಭೂತಿ, ಆಲಿಕಲ್ಲು, ಹಾಲುಗಳೊಡನೆ ತೆಂಗಿನ ಹೊಂಬಾಳೆ ಸೇರಿಸಿ ಸಕ್ಕರೆಯೊಡನೆ ಕೊಟ್ಟರೆ ಸಾಬೂನಿನ ವಿಷವು ಪರಿಹಾರವಾಗುತ್ತದೆ. ಎಲ್ಲೈ ಮಹಿಮಾವಂತನೆ ಕೇಳು ಎಳ್ಳು, ಬೆಳುಗಾರ, ಅಗಸೆಕಾಯಿ ಮತ್ತು ಅಕ್ಕಿಕಚ್ಚುಗಳು ಒಂದೊಂದೇ ಸಾಸುವೆಯಿಂದಾದ ವಿಷವನ್ನು ಪರಿಹರಿಸುತ್ತವೆ. ಹೀಗೆ ಸ್ಥಾವರ ವಿಷಗಳ ಕುರಿತಾಗಿ ಮಂಗರಾಜನು ತನ್ನ ಗ್ರಂಥದಲ್ಲಿ ಚರ್ಚಿಸುತ್ತಾನೆ. ಇವೆಲ್ಲವೂ ಬಹುಮಟ್ಟಿಗೆ ಜಾನಪದ ಸಮೂಹದ ಅನುಭವ ಮತ್ತು ಪ್ರಯೋಗಗಳಿಂದ ಸಿದ್ಧವಾಗಿರುವ ಅಥವಾ ಸೂಚಿತವಾಗಿರುವ ಉಪಚಾರಗಳಾಗಿವೆ.

**ಪರಾಮರ್ಶನ ಗ್ರಂಥಗಳು**


1. ಡಾ. ಧನ್ಯಕುಮಾರ ಇಜಾರಿ: ಜೈನ ಲೌಕಿಕ ಸಾಹಿತ್ಯ ಸಂಪತ್ತು: ಸಿದ್ಧಾಂತ ಕೀರ್ತಿ ಗ್ರಂಥಮಾಲೆ, ಶ್ರೀ ಜೈನ ಮಠ, ಹೊಂಬುಜ.
2. ಡಾ. ಟಿ. ವ್ಹಿ. ವೆಂಕಟಾಚಲಶಾಸ್ತ್ರೀ: ಶಾಸ್ತ್ರ ಸಾಹಿತ್ಯ
3. ಬಿ. ಎಸ್. ಸಣ್ಣಯ್ಯ: ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು.
4. ಡಾ. ಜಿ. ರಾಮಕೃಷ್ಣ: ಭಾರತೀಯ ವಿಜ್ಞಾನದ ಹಾದಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು.
5. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ: ಜೈನ ಪಾರಿಭಾಷಿಕ ಪದಕೋಶ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
6. ತ. ಸು. ಶಾಮರಾಯ: ಕನ್ನಡ ಸಾಹಿತ್ಯ ಚರಿತ್ರೆ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು.
7. ಸಂಗಯ್ಯ ಸ್ವಾಮಿ ಆಗೋಲಿ: ವನಸ್ಪತಿ ಆಯುರ್ವೇದ ವೈದ್ಯಸಾರ: ಪಾರು ಪ್ರಕಾಶನ, ಸ್ಟೇಷನ್ ರೋಡ್, ಗದಗ.
8. ಡಾ. ಧನ್ಯಕುಮಾರ ಇಜಾರಿ: ಜೈನ ವೈದ್ಯಕೀಯ ಪರಂಪರೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.